‘ಐ ನೋ ಎವ್ವೆರಿಥಿಂಗ್ ಎಬೌಟ್ ಯೂ...’

‘ಹೇಗೆ?...’

‘ನಿಮ್ಮ ಆರ್ಡರ್‌ನಲ್ಲಿತ್ತಲ್ಲ?’ ಆಕೆ ಮೋಹಕವಾಗಿ ನಕ್ಕಳು.

‘ಅದನ್ನು ನೀನು ಓದಿರುವ ಸಾಧ್ಯತೆಯಿಲ್ಲ...’

‘ಆದರೆ ಕಂಪೆನಿಯವರು ಅದನ್ನು ನನ್ನ ನೆನಪಿಗೆ ಸೇರಿಸಿದ್ದಾರೆ. ನಾನು ಸ್ಪೆಷಲ್ ರೊಬೊ... ನಿನಗಾಗಿ ತಯಾರಿಸಲಾದ ವಿಶೇಷವಾದ ರೊಬೊ... ಆದರೆ ನಾನು ಮಾನವಳಲ್ಲ ಅಷ್ಟೆ! ಆದರೆ ಮಾನವರನ್ನೂ ಮೀರಿಸಬಲ್ಲೆ.’

ಆ ಸುಂದರ ರೊಬೊ ತನ್ನದೆಂದು ಹೆಮ್ಮೆಪಟ್ಟ ಮನು. ಜೊತೆಗೇ ಮೊದಲ ಬಾರಿಗೆ ಅಳುಕೂ ಮೂಡಿತು. ಏನೋ ಮಾಡಲು ಹೋಗಿ ತಾನು ಏನನ್ನೋ ಮಾಡುತ್ತಿಲ್ಲವಷ್ಟೆ! ಮಾನವರನ್ನೂ ಮೀರಿಸಬಲ್ಲೆ ಎನ್ನುವ ಮಾತಿನ ಅರ್ಥವೇನು?

ರೊಬೊಗಳ ತಯಾರಿಕೆ ಮತ್ತು ಬಳಕೆ ಹೆಚ್ಚಾದಂತೆ ಅವುಗಳ ರಕ್ಷಣೆ ಮತ್ತು ದುರುಪಯೋಗದ ಬಗೆಗೆ ಎಲ್ಲ ದೇಶಗಳಲ್ಲೂ ಕಾನೂನು ಬದಲಾಗಿತ್ತು. ಅವುಗಳ ಬಗೆಗಿನ ಕಾನೂನು ಬಿಗಿಯಾಗಿದೆ. ರೊಬೊ ಕೊಂಡುಕೊಳ್ಳುವುದು ಸುಲಭ. ಆದರೆ ಅದನ್ನು ನಿಷ್ಕ್ರಿಯಗೊಳಿಸುವುದಾಗಲಿ ಇಲ್ಲವೇ ‘ಜಂಕ್’ ಮಾಡುವುದಾಗಲಿ ಕಾನೂನು ಬಾಹಿರ! ಈ ರೊಬೊ ತನ್ನ ಜೊತೆ ಜೀವನ ಪರ್ಯಂತ ಇರುತ್ತೇನೆಂದರೆ?... ರೊಬೊ ಜೊತೆಗೆ ಹೆಚ್ಚಿನ ಸಂಬಂಧವೇನಾದರೂ ಬೆಳೆದುಬಿಟ್ಟರೆ?... ದಿಗಿಲಾಯಿತು!

ತಾನು ನಾಳೆಯೇ ಕಂಪೆನಿಯವರ ಜೊತೆ ಮಾತಾಡಿ ಈ ರೊಬೊ ಬಗೆಗೆ ವಿವರವಾಗಿ ಚರ್ಚಿಸಬೇಕು. ಅಗತ್ಯಬಿದ್ದರೆ ಪ್ರೊಗ್ರಾಮುಗಳನ್ನು ಬದಲಾಯಿಸಬೇಕು ಎಂದು ಯೋಚಿಸಿದ.

‘ಹಲೋ ಮಾಸ್ಟರ್, ಈಗ ಸಮಯ ರಾತ್ರಿ ಎಂಟು ಗಂಟೆ. ನಿಮಗೆ ಊಟದ ಬಗೆಗೆ ಏನಾದರೂ ಯೋಚನೆಯಿದೆಯೆ?... ನಾನು ಕೂಡ ಹಸಿದಿದ್ದೇನೆ...’

ಕಮಲಾ ಮಾತಿಗೆ ಮನು ಇನ್ನೊಮ್ಮೆ ಬೆಚ್ಚಿದ. ರೊಬೊಗೆ ಹಸಿವೆ? ಯಂತ್ರ ಮಾನವರಲ್ಲಿ ಮಾನವರಂತೆ ಜೈವಿಕ ಭಾಗಗಳಿವೆಯೆ? ಏನೋ ತಪ್ಪಾಗುತ್ತಿದೆ... ಎನಿಸಿತು!

‘ನಿನಗೆ ಹಸಿವೆ?... ಬಟ್ ಯೂ ಆರ್ ಅ ರೊಬೊ?...’

‘ಮೈ ಡಿಯರ್ ಸರ್... ನಾನಾಗಲೇ ಹೇಳಿದೆ, ನಾನು ಅತ್ಯಂತ ಸುಧಾರಿತ ರೊಬೊ ಗುಂಪಿಗೆ ಸೇರಿದ್ದೇನೆ! ನಾನು ಮನುಷ್ಯರಿಗಿಂತಲೂ ಮೇಲು! ಜೈವಿಕ ಜೀವಿಯೂ ಹೌದು. ನನ್ನ ದೇಹ ಸ್ಟೆಮ್ ಸೆಲ್ಲಿನಿಂದ ತಯಾರಾಗಿದೆ.’

ಮನು ನಿರುತ್ತರನಾದ. ಅದರ ಜ್ಞಾನ ಅಸಾಧಾರಣ ಎನಿಸತೊಡಗಿತ್ತು. ನೋಡೋಣ, ಇನ್ನೂ ಏನೇನು ಆಗುವುದೋ ಎಂದು ಧೈರ್ಯತಂದುಕೊಂಡ.

‘ಓಕೆ. ಈಗ ಊಟಕ್ಕೆ ಚಪಾತಿ, ಅದಕ್ಕೆ ಮಟರ್ ಪನೀರ್, ಅನ್ನ, ರಸಂ ಮತ್ತು ಮೊಸರು ಆಗಬಹುದೆ?’

‘ಫೈನ್. ನಾನು ಈಗ ಕಿಚನ್ನಿಗೆ ಹೊರಟೆ. ಇನ್ನು ಅರ್ಧ ಗಂಟೆಯಲ್ಲಿ ಡಿನ್ನರ್ ರೆಡಿ. ನೀವು ಬೇರೆ ಕೆಲಸಗಳಿದ್ದರೆ ಮುಗಿಸಬಹುದು. ಹಾಗೇ ರೊಬೊ ಕಂಪೆನಿಗೆ ಫೋನ್ ಮಾಡಿ ಡಿಸೈನರ್ ಜಾಕೋಬ್‌ಗೆ ನಾನು ಸರಿಯಾಗಿ ಇನ್‌ಸ್ಟಾಲ್ ಆಗಿದ್ದೇನೆಂದು ತಿಳಿಸುವಿರಾ? ಪ್ಲೀಸ್...’

‘ಆಗಲಿ. ಆ ಕೆಲಸ ಈಗಲೇ ಮಾಡುತ್ತೇನೆ.’

‘ಯೂ ಆರ್ ಎ ಸ್ವೀಟ್ ಪರ್ಸನ್’ ಎಂದು ಅವನತ್ತ ಮಾದಕವಾಗಿ ನಕ್ಕು ಕಿಚನ್ನಿನ ಕಡೆಗೆ